## ಪೂನಂಗೂ ಸನ್ನಿಯದೇ ಸಂಕಟ!

ಸನ್ನಿ ಲಿಯೋನ್ ಜತೆ ಬಾಲಿವುಡ್ ತಾರೆಯರು ತೆರೆ ಹಂಚಿಕೊಳ್ಳಲು ಹಿಂದೇಟು ಹಾಕುತ್ತಿರುವ ಸುದ್ದಿಯನ್ನು ಕಳೆದ ವಾರ ಓದಿದ್ದೀರಿ. ಮತ್ತೊಬ್ಬ ನಟಿಯದೂ ಇದೇ ಸಂಕಟ. ಈ ನಟಿಯ ಜತೆಗೂ ನಟಿಸಲು ನಟರು ಮುಂದೆ ಬರುತ್ತಿಲ್ಲ. ಈ ನಟಿ ಮತ್ಯಾರೂ ಅಲ್ಲ, ಅರೆನಗ್ನ ಚಿತ್ರಗಳನ್ನು ಸಾಮಾಜಿಕ ತಾಣಗಳಲ್ಲಿ ಹರಿಯಬಿಡುವ, ವಿವಾದಿತ ಹೇಳಿಕೆಗಳನ್ನು ನೀಡುವುದರಲ್ಲಿ ಸದಾ ಮುಂದಿರುವ ಪೂನಂ ಪಾಂಡೆ.

ರೂಪದರ್ಶಿಯಾಗಿದ್ದ ಈಕೆ ಬಾಲಿವುಡ್‌ಗೆ ಕಾಲಿಟ್ಟಿದ್ದು 'ನಶಾ' ಚಿತ್ರದಿಂದ. 'ನಶಾ' ಸಿನಿಮಾದ ಪ್ರಚಾರಕ್ಕೆ ನಶೆ ಏರಿಸುವಂತಹ ಚಿತ್ರಗಳಿಗೆ ಪೋಸು ಕೊಟ್ಟಿದ್ದರೂ ಪ್ರಯೋಜನವಾಗಿರಲಿಲ್ಲ. ಆದರೂ ಪೂನಂ ಖದರು ಕೊಂಚವೂ ಕಡಿಮೆಯಾಗಿಲ್ಲ. ಈಗ ಈ ನಶೆಯ ಹುಡುಗಿ 'ಹೆಲೆನ್' ಆಗಿ ಕಾಣಿಸಿಕೊಳ್ಳುತ್ತಿದ್ದಾಳೆ. ಆದರೆ ಈಕೆಯ ಎದುರು ಅಷ್ಟೇ ಬಿಡುಬೀಸಾಗಿ ನಟಿಸಬಲ್ಲ ನಟ ಸಿಗುತ್ತಿಲ್ಲವಂತೆ. ಖ್ಯಾತ ತಾರೆಯರು ಸನ್ನಿಯಂತೆಯೇ ಪೂನಂ ಜತೆಗೆ ನಟಿಸಲು ಒಪ್ಪಿಕೊಳ್ಳುತ್ತಿಲ್ಲ. ಹೊಸಬರನ್ನು ಹುಡುಕಿದರೂ ಯಾರೂ ಪಾತ್ರಕ್ಕೆ ಹೊಂದಿಕೆಯಾಗುತ್ತಿಲ್ಲ. ನಿರ್ದೇಶಕರು ಮತ್ತು ನಿರ್ಮಾಪಕರು 1 ಸಾವಿರಕ್ಕೂ ಅಧಿಕ ನಟರು, ಮಾಡೆಲ್‌ಗಳನ್ನು ಆಡಿಷನ್ ಮಾಡಿದ್ದರಂತೆ. 'ಆದರೆ ಈ ಯಾವ ನಟರಿಗೂ ನನ್ನೆದುರು ನಟಿಸಲು ಇರಬೇಕಾದ ಸಾಮರ್ಥ್ಯವಿಲ್ಲ' ಎಂದು ಟ್ವಿಟರ್‌ನಲ್ಲಿ ಹೇಳಿಕೊಂಡಿದ್ದಾಳೆ ಪೂನಂ. ಹೀಗಾಗಿ ಆನ್‌ಲೈನ್‌ನಲ್ಲಿ ನಟರ ಶೋಧಕ್ಕೆ ಸ್ವತಃ ಆಕೆಯೇ ಇಳಿದಿದ್ದಾಳೆ. ಈ ಯೋಜನೆಯನ್ನು ನಿರ್ಮಾಪಕರೂ ಮೆಚ್ಚಿಕೊಂಡಿದ್ದಾರಂತೆ.





## ಟೀನಾ ಯೋಗಾಯೋಗ

'ಟೇಬಲ್ ನಂ 21' ಎಂಬ ಥ್ರಿಲ್ಲರ್ ಕಥನದಲ್ಲಿ ಗಮನ ಸೆಳೆದಿದ್ದ ನಟಿ ಟೀನಾ ದೇಸಾಯಿ. 'ಯೇ ಫಾಸ್ಲೀ' ಈಕೆಯ ಮೊದಲ ಬಾಲಿವುಡ್ ಚಿತ್ರ. ಅಂದ ಹಾಗೆ, ಟೀನಾ ಗುಜರಾತಿ ತಂದೆ ಮತ್ತು ತೆಲುಗು ತಾಯಿಗೆ ಬೆಂಗಳೂರಿನಲ್ಲಿ ಹುಟ್ಟಿದ ಬೆಡಗಿ. ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ವಿದ್ಯಾಭ್ಯಾಸ ಪೂರೈಸಿದ ಈ ಕನ್ನಡತಿ, ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿಟ್ಟದ್ದೇ ಅದೃಷ್ಟ ಖುಲಾಯಿಸಿತು. ಆದರೆ ಬಿಟೌನ್ ಈಕೆಯ ಪಾಲಿಗೆ ಅದೃಷ್ಟದಾಯಕವಾಗಿಲ್ಲ. ನಟಿಸಿದ ಸಿನಿಮಾಗಳು ದೊಡ್ಡ ಗೆಲುವು ಕಾಣಲಿಲ್ಲ. ಬಾಲಿವುಡ್‌ನಲ್ಲಿ ಒಂದು ಮಾತಿದೆ. ಬಿಟೌನ್‌ನಲ್ಲಿ ಸತತ ಸೋಲುಗಳನ್ನು ಕಂಡು ಅವಕಾಶಗಳಿಂದ ವಂಚಿತರಾದ ನಟಿಯರು ಅಂತಿಮವಾಗಿ ಸೇರುವುದು ದಕ್ಷಿಣ ಭಾರತದ ಸಿನಿಮಾರಂಗದಲ್ಲಿ ಎಂದು. ಅದು ಸಾರ್ವಕಾಲಿಕ ಸತ್ಯವಾಗಿರದಿದ್ದರೂ ಸಂಪೂರ್ಣ ಸುಳ್ಳು ಎಂದು ಹೇಳಲು ಸಾಧ್ಯವಿಲ್ಲ.

ಟೀನಾ ಈಗಾಗಲೇ ಎರಡು ಬಾರಿ ಹಾಲಿವುಡ್ ವಿಮಾನವೇರಿದ್ದಾರೆ. 'ದಿ ಬೆಸ್ಟ್ ಎಕ್ಸೋಟಿಕ್ ಮ್ಯಾರಿಗೋಲ್ಡ್ ಹೋಟೆಲ್' ಮೂಲಕ ಹಾಲಿವುಡ್‌ಗೆ ಅಡಿಯಿಟ್ಟಿದ್ದ ಟೀನಾ, ಅದರ ಎರಡನೇ ಆವೃತ್ತಿಯಲ್ಲೂ ಕಾಣಿಸಿಕೊಳ್ಳಲಿದ್ದಾರೆ. ಅದರ ನಡುವೆಯೇ 'ಸೆನ್ಸ್ 8' ಎಂಬ ಇಂಗ್ಲಿಷ್ ಧಾರಾವಾಹಿಯ ಅವಕಾಶವೂ ಟೀನಾಗೆ ಒಲಿದಿದೆ. ಒಂದು ಸಿನಿಮಾ ಆಕೆಗೆ ಇಷ್ಟರಮಟ್ಟಿಗೆ ಜನಪ್ರಿಯತೆ ತಂದುಕೊಟ್ಟಿರುವುದು ವಿಶೇಷವೇ ಸರಿ. ಈ ಸರಣಿಗಾಗಿ ಅವರು ಬಾಲಿವುಡ್ ಸಿನಿಮಾಗಳ ಅವಕಾಶಗಳನ್ನು ಒಲ್ಲೆ ಎಂದಿದ್ದಾರಂತೆ. ಮಾತ್ರವಲ್ಲ 'ಹ್ಯಾರಿ ಪಾಟರ್' ಖ್ಯಾತಿಯ ಕ್ರಿಸ್ ಕೊಲಂಬಸ್ ನಿರ್ದೇಶನದ, ಆಡಂ ಸ್ಯಾಂಡ್ಲರ್ ಅಭಿನಯದ 'ಪಿಕ್ಸೆಲ್' ಚಿತ್ರದಲ್ಲಿಯೂ ಆಕೆ ನಟಿಸಬೇಕಿತ್ತು. ಆದರೆ 'ಸೆನ್ಸ್ 8' ಸರಣಿಯಲ್ಲಿ ನಾಲ್ಕು ದೇಶಗಳಲ್ಲಿ ಬಿಡುವಿಲ್ಲದೆ ಚಿತ್ರೀಕರಣಗಳಲ್ಲಿ ತೊಡಗಿಕೊಳ್ಳಬೇಕಿರುವುದರಿಂದ ಈ ಚಿತ್ರದಿಂದಲೂ ಟೀನಾ ದೂರ ಸರಿದಿದ್ದಾಳೆ.

ಬಾಲಿವುಡ್ ಗುರುತಿಸಲು ವಿಫಲವಾದ ಪ್ರತಿಭೆಯೊಂದನ್ನು ಹಾಲಿವುಡ್ ಗುರುತಿಸಿದೆ. ಬಾಲಿವುಡ್ ಪ್ರತಿಭೆಗಳನ್ನು ಗುರುತಿಸುವ, ಉಳಿಸಿಕೊಳ್ಳುವ ವಿಷಯದಲ್ಲಿಯೂ ಸೋಲುತ್ತಿರುವುದು ಹೊಸತಲ್ಲ, ಅಚ್ಚರಿಯೂ ಅಲ್ಲ.

■ ಅಮಿ